# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **757** |
| ಉತ್ತರಿಸಬೇಕಾದ ದಿನಾಂಕ | : | 22.02.2023 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 2 ವರ್ಷಗಳಲ್ಲಿ ಸರ್ಕಾರವು ವಸತಿ (ನಿಗಮ) ಯೋಜನೆಗಳಿಗೆ ಮೀಸಲಿಟ್ಟ ಅನುದಾನವೆಷ್ಟು; ಖರ್ಚಾದ ಹಣವೆಷ್ಟು; (ವಿವರ ನೀಡುವುದು) | 2020-21 ಮತ್ತು 2021-22 ನೇ ಸಾಲಿನಲ್ಲಿ ವಿವಿಧ ವಸತಿ ಯೋಜನೆಗಳಡಿ ಸರ್ಕಾರದಿಂದ ರೂ.5,085.41 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ಸದರಿ ಅನುದಾನಕ್ಕೆ ಎದುರಾಗಿ ರೂ.4,527.34 ಕೋಟಿಗಳನ್ನು ಖರ್ಚು ಮಾಡಲಾಗಿದೆ. ಯೋಜನಾವಾರು ವಿವರ ಈ ಕೆಳಕಂಡಂತಿದೆ. |
| ಆ) | ವಸತಿ ಇಲಾಖೆಯ ನಿಗಮಗಳಲ್ಲಿ ಯಾವ ಯಾವ ಯೋಜನೆಗಳಿಗೆ ಅನುದಾನ ಬಳಕೆಯಾಗಿದೆ; ಬಳಕೆಯಾಗಿರುವ ಅನುದಾನದಲ್ಲಿ ಈವರೆಗೂ ವಸತಿ ಗೃಹಗಳು ನಿರ್ಮಾಣವಾಗದೇ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಇದಕ್ಕೆ ಕಾರಣವೇನು; | (see below) |

(ರೂ.ಕೋಟಿಗಳಲ್ಲಿ)

| ಕ್ರ. ಸಂ. | ಯೋಜನೆಗಳು | ಬಿಡುಗಡೆ | ಖರ್ಚು |
|---|---|---|---|
| 1 | ಬಸವ ವಸತಿ ಯೋಜನೆ | 2022.62 | 1089.80 |
| 2 | ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ ಯೋಜನೆ | 1740.00 | 1356.76 |
| 3 | ದೇವರಾಜ್ ಅರಸು ವಸತಿ ಯೋಜನೆ | 87.00 | 133.44 |
| 4 | ವಾಜಪೇಯಿ ನಗರ ವಸತಿ ಯೋಜನೆ | 602.00 | 557.45 |
| 5 | ಪ್ರಧಾನ ಮಂತ್ರಿ ಆವಾಸ್ ಯೋಜನೆ(ಗ್ರಾ) | 0.00 | 210.41 |
| 6 | ಪ್ರಧಾನ ಮಂತ್ರಿ ಆವಾಸ್ ಯೋಜನೆ - ನಗರ | 633.79 | 1175.34 |
| 7 | ರಾಜೀವ್ ಆವಾಸ್ ಯೋಜನೆ | 0.00 | 4.14 |
| | **ಒಟ್ಟು** | **5085.41** | **4527.34** |

ರಾಜೀವ್ ಗಾಂಧಿ ವಸತಿ ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ವಸತಿ ಯೋಜನೆಗಳಡಿ ಜಿ.ಪಿ.ಎಸ್ ಆಧಾರಿತ ಭೌತಿಕ ಪ್ರಗತಿಗನುಗುಣವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, ಅದರಂತೆ ಮನೆ ನಿರ್ಮಾಣ ಮಾಡಿಕೊಂಡ ಅರ್ಹ ಫಲಾನುಭವಿಗಳ ಆಧಾರ್ ಜೋಡಣೆಗೊಂಡ ಬ್ಯಾಂಕ್ ಖಾತೆಗೆ ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಸರ್ಕಾರದ ಮನೆ ಮಾರ್ಗಸೂಚಿಯನ್ವಯ ನಿಗಮದಿಂದ ಕಾಮಗಾರಿ ಆದೇಶ ನೀಡಿದ 90 ದಿನಗಳೊಳಗಾಗಿ ಫಲಾನುಭವಿಯು ಮನೆಯ ಕಾಮಗಾರಿಯನ್ನು ಪ್ರಾರಂಭಿಸಬೇಕಿದ್ದು, ಒಂದು ವರ್ಷದೊಳಗಾಗಿ ಮನೆಯನ್ನು ಪೂರ್ಣಗೊಳಿಸಬೇಕಾಗಿರುತ್ತದೆ. ಆದರೆ ಫಲಾನುಭವಿಗಳೇ ಮನೆಗಳನ್ನು ಸ್ವತಃ ನಿರ್ಮಿಸಿಕೊಳ್ಳುತ್ತಿದ್ದು, ನಿಗದಿಪಡಿಸಿದ

| | | |
|---|---|---|
| | | ಕಾಲಮಿತಿಯೊಳಗಾಗಿ ಮನೆಗಳನ್ನು ಪೂರ್ಣಗೊಳಿಸುವಂತೆ ಗ್ರಾಮೀಣ ಪ್ರದೇಶದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ಹಾಗೂ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಗಳ ಮುಖಾಂತರ ಹಿಂಬಾಲಿಕ ಕ್ರಮ ಕೈಗೊಳ್ಳಲಾಗುತ್ತಿದೆ. |
| ಇ) | ಬೆಂಗಳೂರು ನಗರದಲ್ಲಿ ಮುಖ್ಯ ಮಂತ್ರಿಗಳ ಒಂದು ಲಕ್ಷ ಮನೆ ಯೋಜನೆಯ ಪ್ರಗತಿ ಯಾವ ಹಂತದಲ್ಲಿವೆ; ಹಾಗೂ ಹಂಚಿಕೆ ಮಾಡುವ ಮನೆಗಳನ್ನು ಪಡೆಯಲು ನಿಗಧಿಪಡಿಸಿರುವ ಮಾನದಂಡಗಳೇನು ? (ಸಂಪೂರ್ಣ ಮಾಹಿತಿ ನೀಡುವುದು) | "1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆಯಡಿ ಇಲ್ಲಿಯವರೆಗೆ 59,476 (ಜಿ+3 ಇಂದ ಎಸ್+14) ಬಹುಮಹಡಿ ಮನೆಗಳ ನಿರ್ಮಾಣಕ್ಕೆ 493 ಎಕರೆ ಜಮೀನನ್ನು ಗುತ್ತಿಗೆದಾರರಿಗೆ ಹಸ್ತಾಂತರಿಸಿ ನಿರ್ಮಾಣ ಕಾಮಗಾರಿಗಳನ್ನು ಪ್ರಾರಂಭಿಸಿದೆ (1 BHK-52735 ಮನೆಗಳು & 2 BHK-6741 ಮನೆಗಳು) ಕಾಮಗಾರಿಗಳ ಪ್ರಗತಿಯ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.<br><br>ಸದರಿ ಯೋಜನೆಯಡಿ ಮನೆ/ಫ್ಲಾಟ್ ಗಳನ್ನು ಪಡೆಯಲು ನಿಗಧಿಪಡಿಸಿರುವ ಮಾನದಂಡಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ. |

ಸಂಖ್ಯೆ :ವಇ 80 ಹೆಚ್ಎಂ 2023

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು

ಅನುಬಂಧ-1

"1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ" ಕಾಮಗಾರಿಗಳ ಪ್ರಗತಿಯ ವಿವರಗಳು.

| | |
|---|---|
| ಮನೆಗಳ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಿರುವ ಮನೆಗಳ ಸಂಖ್ಯೆ | 46,830 ಮನೆಗಳು |
| ಪೂರ್ಣಗೊಂಡ ಮನೆಗಳ ಸಂಖ್ಯೆ [Completed] | 4,789 ಮನೆಗಳು |
| ಮುಕ್ತಾಯ ಹಂತದಲ್ಲಿರುವ ಮನೆಗಳ ಸಂಖ್ಯೆ [Completion stage] | 2,690 ಮನೆಗಳು |
| ಛಾವಣಿ ಹಂತದಲ್ಲಿರುವ ಮನೆಗಳ ಸಂಖ್ಯೆ [Roof Casted] | 5,495 ಮನೆಗಳು |
| ಪ್ಲಿಂತ್/ವಾಲಿಂಗ್ ಮಟ್ಟದಲ್ಲಿರುವ ಮನೆಗಳ ಸಂಖ್ಯೆ [Plinth/ Walling level] | 11,884 ಮನೆಗಳು |
| ತಳಪಾಯದ ಹಂತದಲ್ಲಿರುವ ಮನೆಗಳ ಸಂಖ್ಯೆ [Foundation level] | 5,140 ಮನೆಗಳು |
| ಮಣ್ಣು ಅಗೆತದ ಹಂತದಲ್ಲಿರುವ ಮನೆಗಳ ಸಂಖ್ಯೆ [Earth Work Excavation] | 3,496 ಮನೆಗಳು |
| ಜಮೀನು ಸಮತಟ್ಟು ಹಂತದಲ್ಲಿರುವ ಮನೆಗಳ ಸಂಖ್ಯೆ [Site Clearance/Leveling] | 13,336 ಮನೆಗಳು |

ಮುಖ್ಯ ಅಭಿಯಂತರರು
ರಾ.ಗಾಂ.ವ.ನಿ.ನಿ

## ಅನುಬಂಧ-2

**" 1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ"ಯಡಿ ಫಲಾನುಭವಿಗಳ ಆಯ್ಕೆಯಲ್ಲಿ ಅನುಸರಿಸಲಾಗುವ ಮಾನದಂಡಗಳು.**

1. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ರೂ.3,00,000/- (ಮೂರು ಲಕ್ಷ ರೂಪಾಯಿಗಳು ಮಾತ್ರ) ಗಳ ಮಿತಿಯೊಳಗಿರಬೇಕು.
2. ಅರ್ಜಿದಾರರು ಕನಿಷ್ಠ 5 ವರ್ಷಗಳಿಂದ ಬೆಂಗಳೂರು (ನಗರ) ಜಿಲ್ಲೆಯ ವ್ಯಾಪ್ತಿಯಲ್ಲಿ ವಾಸವಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ವಾಸ ದೃಢೀಕರಣ ಪತ್ರವನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ.
3. ವಸತಿ ರಹಿತ ಕುಟುಂಬವಾಗಿರಬೇಕು.
4. ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ಹೊಂದಿರಬೇಕು.
5. ಅರ್ಜಿದಾರರು ಪಡಿತರ ಚೀಟಿಯನ್ನು ಹೊಂದಿರಬೇಕು.
6. ಆದಾಯ ಪ್ರಮಾಣ ಪತ್ರ ಕಡ್ಡಾಯವಾಗಿರುತ್ತದೆ (ಅರ್ಜಿದಾರರು ಕಂದಾಯ ಇಲಾಖೆಯಿಂದ ನೀಡಲಾಗುವ ಆದಾಯ ಪ್ರಮಾಣ ಪತ್ರದ ಸಂಖ್ಯೆಯನ್ನು ಮಾತ್ರ ನಮೂದಿಸುವುದು. ಸದರಿ ಮಾಹಿತಿಯನ್ನು ತಂತ್ರಾಂಶದ ಸಹಾಯದಿಂದ ಕಂದಾಯ ಇಲಾಖೆಯ ಡಾಟಾಬೇಸ್‌ನಿಂದ "ವೆಬ್ ಸರ್ವೀಸ್" ಮೂಲಕ ನೇರವಾಗಿ "ಡಾಟಾ" ಸೆಳೆದು ತಾಳೆಹಾಕಿ ಖಚಿತಪಡಿಸಿಕೊಳ್ಳಲಾಗುವುದು).
7. ಜಾತಿ ಆಧಾರಿತ ಮೀಸಲಾತಿ ಪಡೆಯಲಿಚ್ಛಿಸುವವರಿಗೆ ಜಾತಿ ಪ್ರಮಾಣ ಪತ್ರ ಕಡ್ಡಾಯವಾಗಿರುತ್ತದೆ (ಅರ್ಜಿದಾರರು ಕಂದಾಯ ಇಲಾಖೆಯಿಂದ ನೀಡಲಾಗುವ ಜಾತಿ ಪ್ರಮಾಣ ಪತ್ರದ ಸಂಖ್ಯೆಯನ್ನು ಮಾತ್ರ ನಮೂದಿಸುವುದು. ಸದರಿ ಮಾಹಿತಿಯನ್ನು ತಂತ್ರಾಂಶದ ಸಹಾಯದಿಂದ ಕಂದಾಯ ಇಲಾಖೆಯ ಡಾಟಾಬೇಸ್‌ನಿಂದ "ವೆಬ್ ಸರ್ವೀಸ್" ಮೂಲಕ ನೇರವಾಗಿ ಸೆಳೆದು ತಾಳೆಹಾಕಿ ಖಚಿತಪಡಿಸಿಕೊಳ್ಳಲಾಗುವುದು).
8. ಅರ್ಜಿದಾರರು ಕಾರ್ಮಿಕ ಇಲಾಖೆಯ ನೊಂದಣಿ ಸಂಖ್ಯೆ (ಕಟ್ಟಡ ನಿರ್ಮಾಣ ಕಾರ್ಮಿಕರಾಗಿದ್ದಲ್ಲಿ) ಹೊಂದಿರಬೇಕು.
9. ಅರ್ಜಿದಾರರು ಚುನಾವಣಾ ಆಯೋಗದ ಗುರುತಿನ ಚೀಟಿ ಸಂಖ್ಯೆಯನ್ನು ಹೊಂದಿರಬೇಕು.
10. ಅರ್ಜಿದಾರರು ವಿಕಲಚೇತನರಾಗಿದ್ದಲ್ಲಿ, ಆ ಬಗ್ಗೆ ಪ್ರಮಾಣ ಪತ್ರವನ್ನು ಹೊಂದಿರಬೇಕು.
11. ಅರ್ಜಿದಾರರು ಆಧಾರ್ ಸೀಡ್ ಆಗಿರುವ ಬ್ಯಾಂಕ್ ಖಾತೆಯ ಸಂಖ್ಯೆಯನ್ನು ಹೊಂದಿರಬೇಕು.
12. ಕ್ಯಾಬ್ ಡ್ರೈವರ್, ಮನೆ ಕೆಲಸದವರು, ತಳ್ಳುವ ಗಾಡಿಯಲ್ಲಿ ಮಾರುವವರು, ರಸ್ತೆ ಬದಿಯಲ್ಲಿ ಮಾರುವವರಿಗೆ ಮೊದಲ ಆದ್ಯತೆ ನೀಡಲಾಗುವುದು.